ಅವೊತ್ತಿನ ಸಂದರ್ಭದಲ್ಲಿ ಸದನದಲ್ಲಿ ನಾಳೆ ಪ್ರಶ್ನೆಗಳು ಪ್ರಸ್ತಾಪವಾಗಬೇಕಿದ್ದರೆ ಹಿಂದಿನ ದಿವಸ ರಾತ್ರಿಯೇ ಉತ್ತರಗಳನ್ನು ಒದಗಿಸಿಕೊಡಲಾಗುತ್ತಿತ್ತೆಂದು ಹೇಳುತ್ತಿರುವುದರಿಂದ, ಈ ರೀತಿಯ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಇಲ್ಲವೇ? ಎಂಬುದರ ಬಗ್ಗೆ ಮಾನ್ಯ ಅಧ್ಯಕ್ಷರು ಗಮನಹರಿಸಬೇಕು.

ಅಧ್ಯಕ್ಷರು: ತಮ್ಮ ಸಲಹೆ ಬಗ್ಗೆ ಆಲೋಚಿಸಿ ನಾನು ಒಂದು ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ಹೆಚ್.ಪುಟ್ಟರಂಗನಾಥ್: ಸರ್ಕಾರ ಇದರ ಬಗ್ಗೆ ಗಮನಹರಿಸಿರುವುದಿಲ್ಲ ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ.

ಅಧ್ಯಕ್ಷರು: ಪ್ರಶ್ನೆಗೆ ಉತ್ತರ ಬಂದಿಲ್ಲವೆಂದ ಮೇಲೆ ಉದಾಹರಣೆ ಕೊಡುವುದು ಬೇಡ. ತಮ್ಮ ಪ್ರಶ್ನೆಗೆ ಉತ್ತರ ಬಂದ ನಂತರವೇ ಮಾತನಾಡಿ.

ಕಮಲಾಪುರ ಕ್ಷೇತ್ರದ ಕೆರೆಗಳ ದುರಸ್ತಿ

22 (321)

ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ): ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಕಮಾಲಾಪುರ ಕ್ಷೇತ್ರದಲ್ಲಿರುವ ನಾಲೆಗಳು ಹಾಗೂ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು (ವಿವರ ನೀಡುವುದು)

ಆ) ಇವುಗಳು ಅನೇಕ ವರ್ಷಗಳಿಂದ ದುರಸ್ತಿಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳೆದ ಮೂರು ವರ್ಷಗಳಲ್ಲಿ ಕಮಲಾಪುರ ಕ್ಷೇತ್ರದಲ್ಲಿರುವ ಕೆರೆಗಳು ಹಾಗೂ ನಾಲೆಗಳ ದುರಸ್ತಿ ಹಾಗೂ ಹೂಳೆತ್ತಲು ಬಿಡುಗಡೆಯಾಗಿರುವ ಹಣ ಎಷ್ಟು; ಮತ್ತು ವೆಚ್ಚ ಮಾಡಿರುವ ಹಣ ಎಷ್ಟು;

ಈ) ಈಗ ದುಸ್ಥಿತಿಯಲ್ಲಿರುವ ಕೆರೆ ಹಾಗೂ ನಾಲೆಗಳ ದುರಸ್ತಿಗೆ ಹಣ ಬಿಡುಗಡೆ ಮಾಡಲಾಗುವುದೆ?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಕ್ಷೇತ್ರದಲ್ಲಿರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ 15, ಸಾಮಾನ್ಯವಾಗಿ ಪ್ರತಿ ಕೆರೆಗೆ ಒಂದು ಅಥವಾ ಎರಡು ನಾಲೆಗಳು ಇರುತ್ತವೆ.

ಆ) ಹೌದು

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	1997-98		1998-99	
		ಅನುದಾನ	ಖರ್ಚು	ಅನುದಾನ	ಖರ್ಚು
1	ನವನಿಹಾಳ ಕೆರೆ	-	-	-	-
2	ದಿನಸಿ ಕೆರೆ	-	-	-	-
3	ಓಕಳಿ ಹಳೆ ಕೆರೆ	-	-	-	-
4	ಹೊಳಕುಂದಾ ಕೆರೆ	-	-	-	-
5	ಕಮಲಾಪುರ (ಉತ್ತರ) ಕೆರೆ	-	-	-	-
6	ಕಮಲಾಪುರ (ದಕ್ಷಿಣ) ಕೆರೆ	-	-	-	-
7	ಭೀಮನಾಳ ಕೆರೆ	-	-	-	-
8	ನೀಲಕೂಡ ಕೆರೆ	-	-	-	-
9	ಮಳಸಾಪುರ ಕೆರೆ	-	-	-	-
10	ಕಲಮೂಡ ಕೆರೆ	25.00	36.00	6.00	9.23
11	ಭೂಂಯೂರ ಕೆರೆ	20.00	35.57	8.00	28.31
12	ಕರಹರಿ ಕೆರೆ	-	-	15.10	1.92
13	ನರೋಣ ಕೆರೆ	-	-	-	-
14	ಮದಗುಣಿಕೆ ಕೆರೆ	5.00	12.89	6.30	14.45
15	ಮಟಕಿ ಕೆರೆ	-	-	0.01	24.78
	ಒಟ್ಟು	50.00	85.06	35.11	78.69

1999-2000 ಅನುದಾನ	ಖರ್ಚು	ಷರಾ
-	1.293	ಸದರಿ ಕೆರೆಗಳ ಹಳೆಯ ಕೆರೆಗಳಾಗಿದ್ದು 2000-2001ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿದೆ
-	0.860	-ಅದೇ-
-	0.002	-ಅದೇ-
-	0.050	-ಅದೇ-
-	0.336	-ಅದೇ-
-	0.053	-ಅದೇ-
-	0.305	-ಅದೇ-
-	0.328	-ಅದೇ-
-	0.937	-ಅದೇ-
4.00	6.980	ಕೆಲಸಪೂರ್ಣಗೊಂಡಿದೆ
5.00	9.180	ಕೆಲಸ ಪೂರ್ಣಗೊಂಡಿದೆ
10.00	20.260	ಕೆಲಸ ಪ್ರಗತಿಯಲ್ಲಿದೆ
3.00	1.350	ಕೆಲಸ ಪ್ರಗತಿಯಲ್ಲಿದೆ
3.00	5.780	ಕೆಲಸ ಪೂರ್ಣಗೊಂಡಿದೆ
0.50	1.555	ಕೆಲಸ ಪ್ರಗತಿಯಲ್ಲಿದೆ
25.50	49.269	

ಶ್ರೀ ರೇವುನಾಯಕ್ ಬೆಳಮಗಿ: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವಂಥ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಟ್ಟಿದ್ದು, ನನ್ನ ಕ್ಷೇತ್ರದಲ್ಲಿ ಒಟ್ಟು 15 ಸಣ್ಣ ನೀರಾವರಿ ಕೆರೆಗಳಿವೆಯೆಂದು ತಿಳಿಸಿದ್ದಾರೆ. ನಾನು ಶಾಸಕ ಆದಾಗಿನಿಂದಲೂ ಈ ಕೆರೆಗಳ ದುರವಸ್ಥೆಯನ್ನು ನೋಡುತ್ತಿದ್ದು, ಇದುವರೆವಿಗೂ ಒಂದು ಕೆರೆಯನ್ನೂ ದುರಸ್ತಿಗೊಳಿಸಲಿಲ್ಲ. ಇವು ಸಣ್ಣ ನೀರಾವರಿ ಕೆರೆಗಳಾಗಿದ್ದರೂ ಸೂಕ್ತ ಕಾಲುವೆಯ ವ್ಯವಸ್ಥೆ ಇರುವುದಿಲ್ಲವಾದ್ದರಿಂದ ಕೆರೆಗಳಿಂದ ರೈತರುಗಳಿಗೆ ಯಾವುದೇ ರೀತಿ ಉಪಯೋಗವಾಗುತ್ತಿಲ್ಲವಾದ್ದರಿಂದ ದುರಸ್ತಿಗೆ ಹಣ ಬಿಡುಗಡೆ ಮಾಡಬೇಕೆಂದು ಕೇಳಿರುವುದಕ್ಕೆ 2000-2001ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿದೆಯೆಂದು ಹೇಳಿದ್ದಾರೆ. ಮುಂದಿನ ವರ್ಷ ಕೆರೆಗಳ ದುರಸ್ತಿಗೆ ಹಣ ಒದಗಿಸಿಕೊಟ್ಟರೆ ಏನೂ ಉಪಯೋಗವಾಗುವುದಿಲ್ಲವಾದ್ದರಿಂದ ಸಧ್ಯದಲ್ಲಿಯೇ ಹಣ ಒದಗಿಸಿಕೊಟ್ಟಲ್ಲಿ ಬೇಸಿಗೆ ಕಾಲದಲ್ಲಿ ದುರಸ್ತಿ ಕಾರ್ಯ ಕೈಗೊಂಡು ರೈತರುಗಳಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅದರ ಜೊತೆಗೆ ನನ್ನ ಕ್ಷೇತ್ರದಲ್ಲಿ ಹೊಳಕುಂದಾ ಕೆರೆ ಇದ್ದು, ಸದರಿ ಕೆರೆಯಿಂದ ರೈತರುಗಳಿಗೆ ಯಾವುದೇ ರೀತಿಯಲ್ಲಿ ಪ್ರಯೋಜನವಾಗುತ್ತಿಲ್ಲದಿರುವ ಬಗ್ಗೆ ಒಮ್ಮೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮತ್ತು ಎಕ್ಸಿಕ್ಯುಟೀವ್ ಇಂಜಿನಿಯರ್ ಅವರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಕೆರೆಯ ದುರಸ್ತಿ ಮಾಡಬೇಕಾದಲ್ಲಿ ಬಹಳಷ್ಟು ಹಣ ಬೇಕಾಗುತ್ತದೆಂದು, ಇಲ್ಲದಿದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲವೆಂದು, ಅಲ್ಲದೆ ನಮ್ಮಲ್ಲಿ ಹಣವಿಲ್ಲವೆಂತಲೂ ಹೇಳುತ್ತಿರುವುದರಿಂದ ಇದನ್ನು ತಾವು ಗಂಭೀರವಾಗಿ ತೆಗೆದುಕೊಂಡು ಸದರಿ ಕೆರೆಯನ್ನು ಇನ್ಸ್‌ಪೆಕ್ಷನ್ ಮಾಡಬೇಕೆಂದು ಸನ್ಮಾನ್ಯ ಸಣ್ಣ ನೀರಾವರಿ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ. ಜೊತೆಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೂಡ ವಿನಂತಿಸಿಕೊಳ್ಳುವುದೇನೆಂದರೆ, ಸಣ್ಣ ಕೆರೆಯಿಂದ ರೈತರಿಗೆ ಬಹಳಷ್ಟು ಅನುಕೂಲವಾಗುವುದರಿಂದ ಸಣ್ಣ ಕೆರೆಗಳ ನಿರ್ಮಾಣಕ್ಕೆ ಹೆಚ್ಚು ಹಣ ಒದಗಿಸಿಕೊಡಬೇಕು. ಕರಹರಿಯಲ್ಲೂ ಸುಮಾರು ಎರಡು ವರ್ಷಗಳಿಂದ ಕೆರೆ ನಿರ್ಮಾಣ ಕಾರ್ಯ ನಡೆಯುತ್ತಿದ್ದು ಹಣ ಸೌಲಭ್ಯ ಒದಗಿಸಿಕೊಡದಿರುವುದರಿಂದ ನಿರ್ಮಾಣ ಕಾರ್ಯ ಅರ್ಧಕ್ಕೆ ನಿಂತಿರುವುದರಿಂದ ಪೂರ್ಣಗೊಳಿಸಲು ಅದಕ್ಕೂ ಕೂಡ ಹಣಕಾಸನ್ನು ಒದಗಿಸಿಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಸಣ್ಣ ಕೆರೆಗಳ ದುರಸ್ತಿಗೆ ಹಾಗೂ ನಿರ್ಮಾಣಕ್ಕೆ ಹಣಕಾಸು ಒದಗಿಸಬೇಕೆಂದು ಮಾನ್ಯ ಸದಸ್ಯರು ಕೇಳಿರುವುದಕ್ಕೆ ಈ ಸಾಲಿನ ಆಯವ್ಯಯದಲ್ಲಿ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಎಷ್ಟರಮಟ್ಟಿಗೆ ಹಣಕಾಸು ಬಿಡುಗಡೆ ಮಾಡುವುದಕ್ಕೆ ಸಾಧ್ಯವಿದೆಯೆಂದು ಗಮನಿಸಿ ತಕ್ಷಣ ಸದರಿ

ಕೆಲಸ-ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ ಹಾಗೂ ಕೆರೆಯನ್ನು ಇನ್ಸ್‌ಪೆಕ್ಷನ್ ಮಾಡಬೇಕೆಂದು ಕೇಳಿರುವುದರಿಂದ ನಾನು ಸಿ.ಇ. ಅವರನ್ನು ಕಳುಹಿಸಿ ಇನ್ಸ್‌ಪೆಕ್ಷನ್ ಮಾಡಿಕೊಂಡು ಬರಲು ತಿಳಿಸುತ್ತೇನೆ ಮತ್ತು ನಾನು ಯಾವಾಗಲಾದರೊಮ್ಮೆ ಸ್ಥಳಕ್ಕೆ ಭೇಟಿ ಕೊಟ್ಟು ನೋಡಿಕೊಂಡು ಬರುವುದಾಗಿ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಬೀದರ್ ಜಿಲ್ಲೆಯಲ್ಲಿ ಕಾರಂಜಾ ಯೋಜನೆ

23 (49)

ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ): ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕಾರಂಜಾ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು?

ಆ) ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆವಿಗೆ ಪ್ರತಿ ವರ್ಷ ಖರ್ಚು ಮಾಡಿರುವ ಹಣವೆಷ್ಟು?

ಇ) ಈ ಯೋಜನೆ ಪೂರ್ಣವಾಗಲು ಅಗತ್ಯವಿರುವ ಅವಧಿಯೆಷ್ಟು?

ಈ) ಈ ಯೋಜನೆಯನ್ನು ನಿಗದಿತ ಅವಧಿಯಲ್ಲಿ ಮುಗಿಸಲು ಸರ್ಕಾರ ಯೋಜನೆಗಳನ್ನೇನಾದರೂ ಹಾಕಿಕೊಂಡಿದೆಯೆ? ಹಾಕಿಕೊಂಡಿದ್ದಲ್ಲಿ ಆ ಯೋಜನೆಗಳ ವಿವರಗಳೇನು?

ಉ) ಯೋಜನೆ ಪೂರ್ಣಗೊಂಡಾಗ ಜಿಲ್ಲೆಯ ಯಾವ ಯಾವ ಭಾಗದಲ್ಲಿರುವ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರಕುವುದು?

ಶ್ರೀ ಹೆಚ್.ಕೆ.ಪಾಟೀಲ್ (ಬೃಹತ್ ನೀರಾವರಿ ಸಚಿವರು):

ಅ) 1969-70ರಲ್ಲಿ ಪ್ರಾರಂಭಿಸಲಾಯಿತು. Started during 1969-70

ಆ) ವಿವರಗಳು ಈ ಕೆಳಕಂಡಂತೆ ಇವೆ.